## ಇಂದು ಬಾನುಲಿ ಪೋನ್ ಇನ್ ಕಾರ್ಯಕ್ರಮ

ಕರಗುಪ್ಪಿ: ಹುಕ್ಕೇರಿ: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು, ಕರ್ನಾಟಕ ಸರಕಾರ ಹಾಗೂ ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರದ ಇವರುಗಳ ಸಂಯುಕ್ತಾಶ್ರಯದಲ್ಲಿ ಹುಕ್ಕೇರಿ ತಾಲೂಕಿನ ಕರಗುಪ್ಪಿ ಗ್ರಾಮದ ಸಮುದಾಯ ರೇಡಿಯೋ ಕೇಂದ್ರದಲ್ಲಿ ನೇರ ಪೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಗ್ರಾಮೀಣ ಕುಡಿಯುವ ನೀರಿನ ಸಮಸ್ಯೆ ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳ ಸಮಸ್ಯೆಗೆ ಸಂಬಂಧಿಸಿದ ವಿಷಯದ ಕುರಿತು ಸಾರ್ವಜನಿಕರು ಕರೆ ಮಾಡಿ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು.

ಮಂಗಳವಾರ ಜೂನ್ 23 ರಂದು ಮುಂಜಾನೆ 11 ಗಂಟೆಯಿಂದ 1 ಗಂಟೆಯವರೆಗೆ ನೇರ ಪೋನ್ ಕಾರ್ಯಕ್ರಮದಲ್ಲಿ ಗೋಕಾಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಾದ ಆಯ್ ಎಮ್ ದಫೇದಾರ, ಕಿರಿಯ ಅಭಿಯಂತರರಾದ ಎಸ್. ಎ ಜಾಧವ, ನೀಲಮ್ಮಾ ಎಸ್. ಲಮಾಣಿ, ಹಾಗೂ ಗುಡ್ ವಿಲ್ ಕ್ರೀಯೇಷನ್ ಕಂಪನಿಯ ಗಂಗಾದರ ಬಡಿಗೇರ ಭಾಗವಹಿಸಲಿದ್ದಾರೆ. ಗ್ರಾಮೀಣ ಕುಡಿಯುವ ನೀರಿನ ಸಮಸ್ಯೆ ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳ ಸಮಸ್ಯೆ, ಕುಂದು ಕೊರತೆ, ಪ್ರಶ್ನೆಗಳು ಮತ್ತು ದೂರುಗಳಿಗೆ ದೂರವಾಣಿಯ ಮೂಲಕ ಉತ್ತರಿಸಲಿದ್ದಾರೆ. ಸಾರ್ವಜನಿಕರು ಕರೆಮಾಡಬೇಕಾದ ದೂರವಾಣಿ ಸಂಖ್ಯೆ 9590551177ಗೆ ಕರೆ ಮಾಡಿ ಪರಿಹಾರ ಕಂಡುಕೊಳ್ಳಬೇಕಾಗಿ ನಿಲಯ ನಿರ್ದೇಶಕರು ಪ್ರಕಟನೆ ಮೂಲಕ ಕೊರಲಾಗಿದೆ.

## ಇಂದು ವೈದ್ಯಕೀಯ ಶಿಕ್ಷಣ ಸಚಿವರ ಜಿಲ್ಲಾ ಪ್ರವಾಸ

ಶಿವಮೊಗ್ಗ, ಜೂನ್-22.ರಾಜ್ಯ ಸರ್ಕಾರದ ವೈದ್ಯಕೀಯ ಶಿಕ್ಷಣ ಸಚಿವ ಡಾ॥ ಕೆ. ಸುಧಾಕರ್‌ರವರು ಜೂನ್-23 ರಂದು ಬೆಳಗ್ಗೆ 11.00 ಗಂಟೆಗೆ ಶಿವಮೊಗ್ಗಕ್ಕೆ ಆಗಮಿಸಿ, ಬೆ. 11.30 ರಿಂದ ಮ.1.00 ರವರೆಗೆ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಮ.2.00 ರಿಂದ 3.00 ರವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೋವಿಡ್-19 ರಹಿನ್ನಲೆಯಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳೊಡನೆ ಸಬೆ ನಂತರ ಸುದ್ಧಿಗೋಷ್ಠಿ ನಡೆಸುವರು.

ಮ. 3.30ಕ್ಕೆ ರಸ್ತೆಯ ಮೂಲಕ ಬೆಂಗಳೂರಿಗೆ ತೆರಳಿಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ವಿಶೇಷ ಸೂಚನೆ: ಸಚಿವರ ಸಭೆಯಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಶಿಷ್ಟಾಚಾರ ಪಾಲಿಸುವುದು.

### ಕೋವಿಡ್-19 ಸೋಂಕಿತ ರೋಗಿಯ ಸಹಜ ಹೆರಿಗೆ ಮಾಡಿಸುವಲ್ಲಿ ವೈದ್ಯರ ತಂಡ ಯಶಸ್ವಿ

## ತಾಯಿ ಅವಳಿ ಹೆಣ್ಣು ಮಕ್ಕಳು ಆರೋಗ್ಯವಂತ: ಸರ್ಜನ್ ಶರಣಪ್ಪ ಕಟ್ಟಿ



ವಿಜಯಪುರ (ಕರ್ನಾಟಕ ವಾರ್ತೆ) ಜೂನ್ 22: ಕೋವಿಡ್-19 ಪಾಸಿಟಿವ್ ರೋಗಿ ಸಂಖ್ಯೆ 8789 ಮಹಿಳೆಗೆ ಸಹಜ ಹೆರಿಗೆ ಮಾಡಿಸುವಲ್ಲಿ ಡಾ.ಮನ್‌ಪ್ರೀತ್ ಕೌರ್ ಅವರನ್ನು ಒಳಗೊಂಡ ತಂಡವು ಯಶಸ್ವಿಯಾಗಿದ್ದು, ಅವಳಿ ಹೆಣ್ಣುಮಕ್ಕಳನ್ನು ಜನ್ಮ ನೀಡಿದ ತಾಯಿ ಹಾಗೂ ಅವಳಿ ಮಕ್ಕಳ ಆರೋಗ್ಯವಂತರಾಗಿದ್ದರೆಂದು ಜಿಲ್ಲಾಸ್ಪತ್ರೆಯ ಸರ್ಜನ್ ಶರಣಪ್ಪ ಕಟ್ಟಿ ಅವರು ತಿಳಿಸಿದ್ದಾರೆ.

ಕೋವಿಡ್-19 ಪಾಸಿಟಿವ್ ಮಹಿಳೆಗೆ ಜನಿಸಿದ ಅವಳಿ ಹೆಣ್ಣು ಮಕ್ಕಳಲ್ಲಿ ಪ್ರಥಮ ಮಗು 2.0 ಕೆ.ಜಿ ಹಾಗೂ ಎರಡನೇ ಮಗು 2.1 ಕೆ.ಜಿ ತೂಕವನ್ನು ಹೊಂದಿದ್ದು, ತಾಯಿ ಸೇರಿದಂತೆ ಅವಳಿ ಹೆಣ್ಣು ಮಕ್ಕಳು ಆರೋಗ್ಯವಂತ ರಾಗಿದ್ದಾರೆಂದು ಅವರು ತಿಳಿಸಿದ್ದಾರೆ.

ಡಾ.ಮನ್‌ಪ್ರೀತ್ ಕೌರ್ ಸಹರೀಯಾ, ಸಿಸ್ಟರ್ ಕಾಶೀಬಾಯಿ, ಡಾ.ಉಪಾಸೆ, ರವಿ ಕೂಚಬಾಳ, ಮೊಹಸೀನ್ ಮಮದಾಪೂರ, ಕ್ಲಾಸ್ ಡಿ ಸಿಬ್ಬಂದಿ ಮಲ್ಲಿಕಾರ್ಜುನ ಅವರನ್ನು ಒಳಗೊಂಡ ವೈದ್ಯರ ತಂಡವು ಕೋವಿಡ್-19 ಮಹಿಳೆಗೆ ಸಹಜ ಮತ್ತು ಯಶಸ್ವಿಯಾಗಿ ಹೆರಿಗೆ ಮಾಡಿಸಿದ್ದು, ಇದಕ್ಕಾಗಿ ವೈದ್ಯರ ತಂಡಕ್ಕೆ ಅಭಿನಂದನೆ ಜೊತೆಗೆ ಪ್ರಶಂಸೆ ಸಹ ನಾಗರೀಕರಿಂದ ವ್ಯಕ್ತವಾಗಿದೆ.

ಈ ಬಗ್ಗೆ ಡಾ.ಮನ್‌ಪ್ರೀತ್ ಕೌರ್ ಸಹರೀಯಾ ಅವರು ಇದು ಇಂತಹ ಎರಡನೇ ಪ್ರಕರಣವಾಗಿದ್ದು, ಅನೇಮಿಯಾದಿಂದ ಬಳಲುತ್ತಿದ್ದ, ಈ ಮಹಿಳೆಗೆ ಬೆಳಿಗ್ಗೆ ಬೇನೆ ಕಾಣಿಸಿಕೊಂಡಿತ್ತು. ನಂತರ ಎಲ್ಲ ಸಿಬ್ಬಂದಿಗಳ ಸಹಕಾರದೊಂದಿಗೆ ಯಶಸ್ವಿಯಾಗಿ ಮಹಿಳೆಗೆ ಸಹಜ ಹೆರಿಗೆ ಮಾಡಿಸಲಾಯಿತು. ಅವಳಿ ಮಕ್ಕಳು ಮತ್ತು ತಾಯಿ ಆರೋಗ್ಯವಾಗಿದ್ದಾರೆ ಎಂದು ತಿಳಿಸಿದ್ದಾರೆ.

## ಜಿ.ಪಂ ಸ್ಥಾಯಿ ಸಮಿತಿಗಳ ಚುನಾವಣೆ ಕುರಿತು ಜೂನ್.25 ರಂದು ಸಾಮಾನ್ಯ ಸಭೆ

ಧಾರವಾಡ ಜೂ.22: ಧಾರವಾಡ ಜಿಲ್ಲಾ ಪಂಚಾಯತಿಯ ಐದು ಸ್ಥಾಯಿ ಸಮಿತಿಗಳ ಸದಸ್ಯರುಗಳ ಸ್ಥಾನಗಳಿಗೆ ಹಾಗೂ ಮೂರು ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳ ಸ್ಥಾನಗಳಿಗೆ ಮೂರನೇ ಅವಧಿಗೆ ಚುನಾವಣೆ ಮೂಲಕ ಆಯ್ಕೆ ಮಾಡುವ ಹಿನ್ನೆಲೆಯಲ್ಲಿ ಜೂನ್.25 ರಂದು ಬೆಳಿಗ್ಗೆ 11 ಗಂಟೆಗೆ ಧಾರವಾಡ ಜಿಲ್ಲಾ ಪಂಚಾಯತ ಸಭಾ ಭವನದಲ್ಲಿ ಸಾಮಾನ್ಯ ಸಭೆ ಹಮ್ಮಿಕೊಳ್ಳ ಲಾಗಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಬಿ.ಸಿ. ಸತೀಶ್ ತಿಳಿಸಿದ್ದಾರೆ.

## ಆರೋಗ್ಯಯುತ ಜೀವನಕ್ಕೆ ಯೋಗ ಅವಶ್ಯ : ಹೊಳೆಪ್ಪನವರ



ಅಥಣಿ: ಜಗತ್ತಿಗೆ ಕಂಟಕವಾಗಿ ಕಾಡುತ್ತಿರುವ ಕೊರೋನಾ ಎಂಬ ಮಹಾಮಾರಿಯ ವಿರುದ್ಧ ಹೋರಾಡಲು ಮತ್ತು ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಂಡು ಆರೋಗ್ಯಯುತ ಜೀವನ ಸಾಗಿಸಲು ಪ್ರತಿನಿತ್ಯ ಯೋಗ ಮತ್ತು ಪ್ರಾಣಾಯಾಮಗಳನ್ನು ರೂಢಿಸಿಕೊಳ್ಳಬೇಕು ಎಂದು ತಾಲೂಕಾ ಪತಂಜಲಿ ಯೋಗಪೀಠದ ಅಧ್ಯಕ್ಷ ಎಸ್.ಕೆ.ಹೊಳೆಪ್ಪನವರ ಹೇಳಿದರು. ಅವರು ರವಿವಾರ ಅಂತರಾಷ್ಟ್ರೀಯ ಯೋಗ ದಿನಾಚರಣೆ ನಿಮಿತ್ತ ಸ್ಥಳೀಯ ಚಿಕ್ಕಟ್ಟಿ ಶಿಕ್ಷಣ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಮನೆ ಮನೆಯಲ್ಲಿ ಮಕ್ಕಳಿಗೆ ಯೋಗ(ಫೇಸ್‌ಬುಕ್ ಲೈವ್) ಕಾರ್ಯಕ್ರಮದಲ್ಲಿ ಎಲ್ಲ ಪಾಲಕರನ್ನು ಮತ್ತು ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು.

ದೇಹ ಮತ್ತು ಮನಸ್ಸುಗಳ ಸಂಯೋಗವೇ ಯೋಗ. ಇಂದಿನ ದಿನಮಾನಗಳಲ್ಲಿ ಶೈಕ್ಷಣಿಕ ಹಂತದಲ್ಲಿ ವಿದ್ಯಾರ್ಥಿಗಳಿಗೆ ಮನಸ್ಸಿನ ಏಕಾಗ್ರತೆ ಗಳಿಸಿಕೊಳ್ಳುವುದು ಬಹುದೊಡ್ಡ ಸವಾಲಾಗಿದೆ. ಇದನ್ನು ಸುಲಭವಾಗಿ ಸಾಧಿಸಬೇಕಾದರೆ ವಿದ್ಯಾರ್ಥಿಗಳು ಸ್ವಲ್ಪ ಸಮಯವನ್ನು ಯೋಗ, ಪ್ರಾಣಾಯಾಮ ಮತ್ತು ದ್ಯಾನಕ್ಕಾಗಿ ಮೀಸಲಿಡಬೇಕು ಎಂದು ಹೇಳಿದರು.

ಚಿಕ್ಕಟ್ಟಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸುರೇಶ. ಚಿಕ್ಕಟ್ಟಿ ಮಾತನಾಡಿ ಕೋರೊನಾ ನಿಮಿತ್ಯ ಎಲ್ಲ ಪಾಲಕರಿಗೆ ಹಾಗೂ ಮಕ್ಕಳಿಗೆ ಮನೆಯಲ್ಲಿಯೇ ಕುಳಿತು ಯೋಗ ಮಾಡಲು ಸಹಾಯವಾಗುವ ನಿಟ್ಟಿನಲ್ಲಿ ಈ ಒಂದು ಫೇಸ್‌ಬುಕ್ಕ ಲೈವ್ ಕಾರ್ಯಕ್ರಮದ ಮೂಲಕ 6ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ಹೇಳಿದರು.

ಯೋಗ ಶಿಕ್ಷಕರಾದ ಶಿವಪುತ್ರ ಯಾದವಾಡ, ಜಗದೀಶ ಮಿರಜಕರ ಮತ್ತು ಸಂಸ್ಥೆಯ ಕಾರ್ಯದರ್ಶಿ ಸದಾಶಿವ ಚಿಕ್ಕಟ್ಟಿ ಸೇರಿದಂತೆ ಇನ್ನೀತರರು ಉಪಸ್ಥಿತರಿದ್ದರು. ಸಾಮಾಜಿಕ ಅಂತರ ಕಾಯುದುಕೊಳ್ಳುವ ಮೂಲಕ ಮಕ್ಕಳಿಗೆ ಮತ್ತು ಪಾಲಕರಿಗೆ ಯೋಗದ ಪ್ರಾತ್ಯಕ್ಷತೆಗಳನ್ನು ನೀಡಲಾಯಿತು.

## ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸಲು ರಮೇಶ ಹುಲೆಣ್ಣವರ ಆಗ್ರಹ



ಬೈಲಹೊಂಗಲ 22- ರಾಜ್ಯದಲ್ಲಿರುವ ನಗರಸಭೆ ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ದಿನಗೂಲಿಯಾಗಿ ಸೇವೆ ಸಲ್ಲಿಸುತ್ತಿರುವ ದಲಿತ ಪೌರಕಾರ್ಮಿಕರನ್ನು ಸರಕಾರ ಖಾಯಂಗೊಳಿಸಬೇಕೆಂದು ಆಗ್ರಹಿಸಿ ರಾಜ್ಯ ಡಿ.ಎಸ್.ಎಸ್ ತಾಲೂಕಾ ಸಂಚಾಲಕ ರಮೇಶ.ಬ.ಹುಲೆನ್ನವರ ಸರಕಾರವನ್ನು ಆಗ್ರಹಿಸಿದ್ದಾರೆ.

ದಲಿತ ದಿನಗೂಲಿ ಪೌರ ಕಾರ್ಮಿಕರು ರಾಜ್ಯದೆಲ್ಲೆಡೆ ಬಹಳ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು ಅತಿವೃಷ್ಠಿ ಅನಾವೃಷ್ಠಿ ಮತ್ತು ಜಗತ್ತಿನಾದ್ಯಂತ ವ್ಯಾಪಕವಾಗಿ ಹರಡುತ್ತಿರುವ ಮಹಾಮಾರಿ ಕೊರೊನಾ ವೈರಸನಲ್ಲಿ ವಾರಿಯರರ್ಸ ಆಗಿ ತಮ್ಮ ಜೀವನ ಹಂಗು ತೊರೆದು ಸೇವೆ ಸಲ್ಲಿಸುತ್ತಿದ್ದಾರೆ ಇಂತಹ ಸಂದರ್ಭದಲ್ಲಿ ಕನಿಷ್ಠ ವೇತನದಡಿಯಲ್ಲಿ ದಿನಗೂಲಿ ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದು ನೇರ ಪಾವತಿ ಪೌರಕಾರ್ಮಿಕರಿಗೆ ಆರ್ಥಿಕವಾಗಿ ತೊಂದರೆಯಾಗುತ್ತಿದೆ. ಆದ್ದರಿಂದ ದಿನಗೂಲಿ ಕಾರ್ಮಿಕರನ್ನು ಸರಕಾರ ಶೀಘ್ರ ಖಾಯಂಗೊಳಿಸಬೇಕೆಂದು ಆಗ್ರಹಿಸಿ ಸಂಬಂದಪಟ್ಟ ಸಚಿವರಿಗೆ ಮುಖ್ಯಮಂತ್ರಿಗಳಿಗೆ ಶಾಸಕರಿಗೆ ಮನವಿ ಅರ್ಪಿಸಿದ್ದಾರೆ. ಒಂದು ವೇಳೆ ದಿನಗೂಲಿ ಪೌರಕಾರ್ಮಿಕರನ್ನು ಸರಕಾರ ಖಾಯಂಗೊಳಿಸದಿದ್ದರೆ-ಕರ್ನಾಟಕ ರಾಜ್ಯಾದ್ಯಂತ ದಲಿತ ಸಂಘರ್ಷ ಸಮಿತಿಯಿಂದ ಉಗ್ರ ಹೋರಾಟ ಮಾಡುವುದಾಗಿ ರಮೇಶ ಹುಲೆನ್ನವರ ತಿಳಿಸಿದ್ದಾರೆ. ರಾಜ್ಯದಲ್ಲಿ ನೇರ ಪಾವತಿ ಆಧಾರದಲ್ಲಿ ಸೇವೆಸಲ್ಲಿಸುತ್ತಿರುವ ಪೌರಕಾರ್ಮಿಕರನ್ನು ಕೂಡಲೆ ಖಾಯಂ ನೇಮಕ ಮಾಡಿಕೊಳ್ಳಬೇಕೆಂದು ಆಗ್ರಹಿಸಿ ಸೋಮವಾರದಂದು ದಿನಗೂಲಿ ಪೌರಕಾರ್ಮಿಕರು ಉಪವಿಭಾಗಾಧಿಕಾರಿಗಳಿಗ ಮನವಿ ಸಲ್ಲಿಸಿದರು.

ದಿನಗೂಲಿ ಪೌರಕಾರ್ಮಿಕರಾದ ಅಶೋಕ ಹುಲೆನ್ನವರ ಉಳುವಪ್ಪ ಭರಮನ್ನವರ ಬಸಪ್ಪ ವ್ಯಾಗೇರಿ, ಮಲ್ಲಪ್ಪ ಹರಿಜನ, ಯಶವಂತ ಹುಲೆನ್ನವರ ಸಂಜು ಬಡ್ಲಿ, ರಗುವೀರ ವಗ್ಗರ ಹನುಮಂತ ಪೂಜೇರಿ, ಕಲ್ಲಪ್ಪ ಭರಮನ್ನವರ, ಮಲ್ಲಪ್ಪ ಪಟ್ಟಿಹಾಳ, ಮಹಾಂತೇಶ ಪಟ್ಟಿಹಾಳ, ಸಿದ್ರಾಮ ತಟವಾಟಿ, ಮಹಾದೇವ ಮ್ಯಾಗೇರಿ, ರವಿ ಚಿಕ್ಕನ್ನವರ, ಶ್ರೀಕಾಂತ ಕಡತಾಳ ಇದ್ದರು.

## ಕೊರೋನಾ ಬೇಗ ದೂರಾಗಲಿ ಬಸವಲಿಂಗ ಸ್ವಾಮೀಜಿ

ಬೈಲಹೊಂಗಲ 22- ವಿಶ್ವವ್ಯಾಪಿ ಹರಡಿರುವ ಕೊರೋನಾ ಎಂಬ ಮಹಾಮಾರಿ ರೋಗ ಆದಷ್ಟು ಬೇಗ ದೂರಾಗಿ ನಾಡಿನ ಜನತೆ ಉತ್ತಮ ಆರೋಗ್ಯ ಹೊಂದುವಂತಾಗಲಿ ಎಂದು ರುದ್ರಾಕ್ಷಿಮಠದ ಪೀಠಾಧಿಕಾರಿ ಪೂಜ್ಯ ಬಸವಲಿಂಗ ಮಹಾಸ್ವಾಮಿಗಳು ದೇವರಲ್ಲಿ ಪ್ರಾರ್ಥಿಸಿದರು.ರವಿವಾಋ ಅಮವಾಸೆಯಂದು ಸಾಯಂಕಾಲ ರುದ್ರಾಕ್ಷಿ ಮಠದಲ್ಲಿ ಜರಿಗಿದ ಸತ್ಸಂಗ ಕಾರ್ಯಕ್ರಮದಲ್ಲಿ ಮಾತನಾಡಿದ ಪೂಜ್ಯರು ಕೊರೋನಾ ಮಹಾಮಾರಿ ರೋಗವು ದೇಶ ರಾಜ್ಯದಲ್ಲಿ ಅಷ್ಟೇ ಅಲ್ಲಿದೆ ವಿಶ್ವವ್ಯಾಪಿ ಹರಡಿದೆ. ಈ ರೋಗ ನಮ್ಮಿಂದ ದೂರವಾಗಬೇಕಾದರೆ ನಾವೆಲ್ಲರೂ ಮಾಸ್ಕ ಹಾಕಿಕೊಳ್ಳಬೇಕು ಅಲ್ಲಿದೇ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಹಾಗೂ ಸ್ವಚ್ಛತೆ ಕಾಪಾಡಿಕೊಂಡು ಕೊರೋನಾ ಬರದಂತೆ ಮುಂಜಾಗ್ರತೆ ಕ್ರಮ ಕೈಗೊಂಡು ಉತ್ತಮ ಆರೋಗ್ಯ ಹೊಂದಿ ಸಮಾಜದಲ್ಲಿ ಒಳ್ಳೆಯವರಾಗಿ ಬದುಕಬೇಕೆಂದು ನುಡಿದರು.

ಶ್ರಾವಣ ಕಾರ್ಯಕ್ರಮ ರದ್ದು: ಸ್ಥಳೀಯ ರುದ್ರಾಕ್ಷಿಮಠದಲ್ಲಿ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ನಡೆಯುವ ಪುರಾಣ ಪ್ರವಚನ ಶಾಸ್ತ್ರ ಕಾರ್ಯಕ್ರಮವನ್ನು ಕೊರೋನಾ ಮಾಹಾಮಾರಿ ರೋಗ ಇರುವದರಿಂದ ಈ ವರ್ಷಶ್ರಾವಣ ಮಾಸದಲ್ಲಿ ನಡೆಯುವ ಪುರಾಣ ಶಾಸ್ತ್ರ ಪ್ರವಚನ ಕಾರ್ಯಕ್ರಮವನ್ನು ರದ್ದು ಮಾಡಲು ರವಿವಾರ ನಡೆದ ಪೂರ್ವಬಾವಿ ಸಭೆಯಲ್ಲಿ ಮಠದ ಹಿರಿಯರು ಭಕ್ತರು ನಿರ್ಧಸಿದರು.

## ಬಾಲ ನ್ಯಾಯ ಮಂಡಳಿ ಸದಸ್ಯರ ಆಯ್ಕೆಗೆ ಅರ್ಜಿ ಆಹ್ವಾನ

ವಿಜಯಪುರ ಜೂನ್ 22 : ಬಾಲ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಮಾದರಿ ನಿಯಮಗಳು 2016 ನಿಯಮ 87ರನ್ವಯ, ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲ ನ್ಯಾಯ ಮಂಡಳಿಗಳ ಸದಸ್ಯರುಗಳನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿಯನ್ನು ರಚಿಸಬೇಕಾಗಿದ್ದು,ಈ ಆಯ್ಕೆ ಸಮಿತಿಯಲ್ಲಿ ಮಕ್ಕಳ ಅಭಿವೃದ್ಧಿ ಅಥವಾ ರಕ್ಷಣೆ ಕ್ಷೇತ್ರದಲ್ಲಿ ಕನಿಷ್ಠ 7 ವರ್ಷಗಳ ಕಾರ್ಯ ನಿರ್ವಹಿಸಿದ ಅನುಭವವಿರುವ 2 ಪ್ರತಿಷ್ಠಿತ ಸಂಸ್ಥೆಗಳ ಪ್ರತಿನಿಧಿಗಳಾಗಿರಬೇಕು ಆದರೆ ಅವರು ಯಾವುದೇ ಮಕ್ಕಳ ಸಂಸ್ಥೆಯನ್ನು ನಡೆಸದ ಅಥವಾ ಆಡಳಿತ ಮಾಡದವರಾಗಿರತಕ್ಕದ್ದು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿಜಯಪುರ ಅವರು ತಿಳಿಸಿದ್ದಾರೆ.

ಅದರಂತೆ ಈ ಅರ್ಹತೆವುಳ್ಳ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಸದಸ್ಯರಾಗ ಬಯಸಿದ್ದಲ್ಲಿ ಮನವಿ/ಅರ್ಜಿಯನ್ನು ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ, ಎರಡನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ ವೀಧಿ, ಬೆಂಗಳೂರು-560001. ಇವರಿಗೆ ಈ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ 7 ದಿನಗಳೊಳಗಾಗಿ ಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೀನ್‌ದಯಾಳ ಅಂತ್ಯೋದಯ ಯೋಜನೆ ಸೌಲಭ್ಯಕ್ಕೆ ಅರ್ಜಿ

ಬಾಗಲಕೋಟೆ: ಜೂನ್ 22 : ಬಾಗಲಕೋಟೆ ನಗರಸಭೆಯು ಪ್ರಸಕ್ತ ಸಾಲಿನಲ್ಲಿ ದೀನದಯಾಳ ಅಂತ್ಯೋದಯ ಯೋಜನೆ ಅಭಿಯಾನದಡಿ ನಗರ ಪ್ರದೇಶದ ಆಯ್ದ ಬಡ ಫಲಾನುಭವಿಗಳಿಂದ ಸ್ವಯಂ ಉದ್ಯೋಗ, ಗುಂಪು ಉದ್ಯೋಗಕ್ಕೆ ಬ್ಯಾಂಕ್ ಸಾಲ ಪಡೆಯಲು ಹಾಗೂ ಕೌಶಲ್ಯ ಆಧಾರಿತ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಸಲಾಗಿದೆ. ಅರ್ಜಿ ಸಲ್ಲಿಸುವ ಕೊನೆಯ ದಿನ ಜುಲೈ 13 ರಂದು ಸಂಜೆ 5 ಗಂಟೆಯೊಳಗಾಗಿ ಪೌರಾಯುಕ್ತರು, ನಗರಸಭೆ, ಬಾಗಲಕೋಟೆ ಇವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 08354-235792ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

## ಸೂರ್ಯಗ್ರಹಣ ವೀಕ್ಷಣೆ

ಹುಬ್ಬಳ್ಳಿ / ಧಾರವಾಡ: ಭಾರತದಾದ್ಯಂತ ಭಾನುವಾರದಂದು ಗೋಚರಿಸಿದ ಸೂರ್ಯಗ್ರಹಣವನ್ನು ವೈಜ್ಞಾನಿಕವಾಗಿ ವೀಕ್ಷಿಸಲಾಯಿತು. ಧಾರವಾಡದಲ್ಲಿ ವಿನೇಶ್ ಕಾಂಬಳೆ, ವೈಷ್ಣವಿ ಕಾಂಬಳೆ ಹಾಗೂ ಶಶಿಕಲಾ ಕಾಂಬಳೆ ಅವರು ತಮ್ಮ ಮನೆಯ ಟೆರಸ್ ಮೇಲೆಯೇ ವೈಜ್ಞಾನಿಕವಾಗಿ ಕನ್ನಡಕ ಧರಿಸಿ ಸೂರ್ಯಗ್ರಹಣವನ್ನು ವೀಕ್ಷಿಸಿದರು. ಈ ಎಲ್ಲ ಚಿತ್ರಗಳನ್ನು ಶಿವರಾಜ ಕಾಂಬಳೆ ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ.



## ಸ್ಯಾನಿಟರಿ ನ್ಯಾಪಕಿನ್ ವಿತರಣೆಗೆ ಕ್ರಮ : ಸಿಇಓ ಮಾನಕರ




ಬಾಗಲಕೋಟೆ: ಜೂನ್ 22 : ಶುಚಿ ಯೋಜನೆಯಡಿ ಮಹಿಳೆಯರಿಗೆ ಮತ್ತು ಹದಿಹರೆಯದ ಹೆಣ್ಣು ಮಕ್ಕಳಿಗೆ ನೀಡುವ ಸ್ಯಾನಿಟರಿ ನ್ಯಾಪಕಿನ್‌ಗಳನ್ನು ನಗದಿತ ಅವಧಿಯೊಳಗೆ ವಿತರಣೆಯಾಗದಿದ್ದಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಜಿ.ಪಂ ಸಿಇಓ ಗಂಗೂಬಾಯಿ ಮಾನಕರ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಶುಚಿ ಯೋಜನೆ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರತಿ ವರ್ಷ ಬಂದಂತಹ ಸ್ಯಾನಟರಿ ನ್ಯಾಪಕಿನ್‌ಗಳ ವಿತರಣೆಗೆ ವಿವಿಧ ಇಲಾಖೆಗೆ ರಸಬರಾಜು ಆಗಬೇಕು. ವಿತರಿಸದ ಬಗ್ಗೆ ದಾಖಲೆ ಇಡಬೇಕು. ಸರಬರಾಜು ಆದ 7 ದಿನಗಳಲ್ಲಿ ವಿತರಣೆಗೆ ಕ್ರಮಕೈಗೊಳ್ಳಬೇಕು. ವಿತರಣೆಯಾದ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಿತಿಗೆ, ತಾಲೂಕಾ ಹಂತದಲ್ಲಿ ತಾಲೂಕಾ ಸಮಿತಿಯ ಗಮನಕ್ಕೆ ತರಲು ಸೂಚಿಸಿದರು. ಇತ್ತೀಚೆಗೆ ಬಾಗಲಕೋಟೆಯ 50 ಹಾಸಿಗೆಯ ಆಸ್ಪತ್ರೆಯಲ್ಲಿರುವ ತಾಲೂಕಾ ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ನ್ಯಾಪಕಿನ್‌ಗಳನ್ನು ವಿತರಣೆ ಮಾಡಿರುವುದು ಕಂಡುಬಂದಿತು. ಜನವರಿ ಮಾಹೆಯಲ್ಲಿಯೇ 4 ಲಕ್ಷ ನ್ಯಾಪಕಿನ್‌ಗಳು ಇದ್ದರು ವಿತರಿಸದೇ ಇಲಾಖೆಯ ಕಚೇರಿಯ ನೆಲದ ಮೇಲೆ ಇಟ್ಟಿರುವದನ್ನು ಹಾಗೂ ಕಳೆದ 2019-20ನೇ ಸಾಲಿನಲ್ಲಿ ಜಿಲ್ಲೆಯ ಆಶಾ ಕಾರ್ಯಕರ್ತೆಯರಿಗೆ ನೀಡಲು ಬಂದಿದ್ದ ಆರೋಗ್ಯ ಕಿಟ್ ವಿತರಿಸದೇ ಇರುವುದು ಕಂಡುಬಂದ ಹಿನ್ನಲೆಯಲ್ಲಿ ತುರ್ತಾಗಿ ಸಭೆ ಕರೆದಿರುವುದಾಗಿ ತಿಳಿಸಿದರು. ಹದಿಹರೆಯದ ಹೆಣ್ಣು ಮಕ್ಕಳು ಋತುಕಾಲದ ಸಮಯದಲ್ಲಿ ಶುಚಿತ್ವವಿಲ್ಲದ ಅಭ್ಯಾಸಗಳಿಂದ ಉಂಟಾಗಬಹುದಾದ ಸೋಂಕುಗಳಿಂದ ಶಾಲೆಗೆ ಗೈರು ಹಾಜರಾಗುವುದು ಹಾಗೂ ತಮ್ಮ ದೈನಂದಿನ ಆರ್ಥಿಕ, ಕೌಟುಂಬಿಕ ಚಟುವಟಿಕೆಗಳಿಂದ ದೂರ ಉಳಿಯುವ ಕಾರಣಕ್ಕಾಗಿ ಸ್ಯಾನಟರಿ ನ್ಯಾಪಕಿನ್‌ಗಳ ಬಳಕೆಯ ಅರಿವು ಮೂಡಿಸುವ ನಿಟ್ಟಿನಲ್ಲಿ ಸರಕಾರ ಶುಚಿ ಯೋಜನೆ ರೂಪಿಸಿದ್ದು, ಇದನ್ನು ಸರಿಯಾಗಿ ಅನುಷ್ಠಾನಗೊಳಿಸದಿರುವುದನ್ನು ಕಂಡು ಅಸಮಾಧಾನ ವ್ಯಕ್ತಪಡಿಸಿದರು. ಈಗಾಗಲೇ ಬಂದ ದಾಸ್ತಾನುಗಳನ್ನು ಇಲಾಖಾವಾರು ಸರಬರಾಜು ಮಾಡಬೇಕು. ಸರಬರಾಜು ಆದ ತಕ್ಷಣ ವಿತರಣೆಗೆ ಕ್ರಮಕೈಗೊಳ್ಳಲು ಸೂಚಿಸದರು. ಶುಚಿ ಯೋಜನೆ ಅನುಷ್ಠಾನದಲ್ಲಿ ನಿರ್ಲಕ್ಷ ತೋರಿದ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಬಿ.ಜಿ. ಹುಬ್ಬಳ್ಳಿ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಈಗ ದಾಸ್ತಾನುಗಳು ಸರಬರಾಜು ಆಗಿ ನ್ಯಾಪಕಿನ್ ವಿತರಣೆಗೊ ಳ್ಳುತ್ತಿವೆ. ಉಳಿದ ತಾಲೂಕಾವಾರು ವಿತರಣೆಗೆ ಬಾಕಿ ಇದ್ದರೆ ತಕ್ಷಣ ವಿತರಣೆ ಮಾಡಲು ಸೂಚಿಸಿದರು. ಅನಿರೀಕ್ಷಿತ ಭೇಟಿ ಸಂದರ್ಭ ದಲ್ಲಿ ದಾಸ್ತಾನು ಇರುವುದು ಕಂಡು ಬಂದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗುವುದೆಂದು ಅಧಿಕಾರಿಗಳಿಗೆ ಸೂಚಿಸಿದರು. ಆಯಾ ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿಗಳು ವಿತರಣೆಗೆ ಕ್ರಮಕೈಗೊಳ್ಳಲು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಇಲಾಖೆಗೆ ದಾಸ್ತಾನುಗಳನ್ನು ವಿತರಿಸಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ ರೆಡ್ಡಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಜಗದೀಶ ಹೆಬ್ಬಳ್ಳಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮಂಜುನಾಥ ಡಂಬರ, ಅಲ್ಪಸಂಖ್ಯಾತರ ಇಲಾಖೆಯ ಉಪನಿರ್ದೇಶಕ ಮೇಲಿನಮನಿ ಸೇರಿದಂತೆ ಆಯಾ ತಾಲೂಕಾ ಕಾರ್ಯ ನಿರ್ವಾಹಕ ಅಧಿಕಾರಿಗಳು, ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

## ಜೋಳದರಾಶಿ ದೊಡ್ಡನಗೌಡರ ಕಂಚಿನ ಪ್ರತಿಮೆ ಸ್ಥಾಪನೆಗೆ ಆಗ್ರಹ



ಬಳ್ಳಾರಿ : ನಗರದ ಹೊಸ ಬಸ್ ನಿಲ್ದಾಣದ ಪಕ್ಕದಲ್ಲಿರುವ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸಿದ ಉದ್ಯಾನವನದಲ್ಲಿ ಶ್ರೀ ದೊಡ್ಡನ ಗೌಡರ ಕಂಚಿನ ಪ್ರತಿಮೆಯನ್ನು ಸ್ಥಾಪಿಸುವ ಮೂಲಕ ದೊಡ್ಡನಗೌಡರ ಜೀವನ ಸಾಧನೆಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸಲು ಮುಂದಾಗಬೇಕೆಂದು ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ದಮ್ಮೂರು ಶೇಖರ್ ಅವರಲ್ಲಿ ಮನವಿ ಮಾಡಲಾಯಿತು.

ರಂಗತೋರಣ ಕಾರ್ಯದರ್ಶಿ ಪ್ರಭುದೇವ ಕಪ್ಪಗಲ್ಲು, ಜೋಳದರಾಶಿ ರಾಮೇಶ ಟ್ರಸ್ಟ್‌ನ ಅಧ್ಯಕ್ಷ ಜೋಳದರಾಶಿ ಪೊಂಪನಗೌಡರು ಹಾಗೂ ಜೋಳದರಾಶಿ ದೊಡನಗೌಡ ಪ್ರತಿಷ್ಠಾನದ ಗೌರವಾದ್ಯಕ್ಷರಾದ ಬಿ.ಸಿದ್ದನಗೌಡರ ನೇತೃತ್ವದ ರಂಗತೋರಣದ ಕಾರ್ಯಕರ್ತರ ನಿಯೋಗವು ದಿ. ಜೂನ್-22 ರಂದು ನಗರದ ಬುಡಾ ಕಛೇರಿಯಲ್ಲಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ದಮ್ಮೂರು ಶೇಖರ್ ಅವರನ್ನು ಭೇಟಿಯಾಗಿ ಮನವಿ ಪತ್ರ ನೀಡಲಾಯಿತು.

ಜೋಳದರಾಶಿ ದೊಡ್ಡನಗೌಡರು ಈ ನಾಡು ಕಂಡ ಸಾಂಸ್ಕೃತಿಕ ಮೇರುವ್ಯಕ್ತಿ. ಕರ್ನಾಟಕ ಏಕೀಕರಣ ಚಳುವಳಿಯ ಹೋರಾಟಗಾರ, ವಿದೇಶಗಳಲ್ಲೂ ಖ್ಯಾತಿ ಗಳಿಸಿದ ಬಳ್ಳಾರಿ ರಾಘವ ಅವರ ಶಿಷ್ಯರಾಗಿ ಕನ್ನಡ, ತೆಲುಗು ಭಾಷೆಗಳ ನಾಟಕಗಳಲ್ಲಿ ಅಭಿನಯಿಸಿ ಭೇಷ್ ಅನ್ನಿಸಿಕೊಂಡವರು. ನಾಡಿನ ಪ್ರಖ್ಯಾತ ಸಾಹಿತಿಗಳಾದ ಕುವೆಂಪು, ಡಿ.ವಿ.ಜಿ., ಮಾಸ್ತಿ, ಬಿ.ಎಂ.ಶ್ರೀ., ಅನಕೃ ನಾಟಕಕಾರರಾದ ಕೈಲಾಸಂ, ಶ್ರೀರಂಗ ಅವರಿಂದ ನಾಟಕ ವಚನ-ಪ್ರವಚನ, ಲಾವಣಿ, ಪ್ರಾಚೀನ ಕಾವ್ಯಗಳ ಗಮಕ ಗಾಯನಕ್ಕಾಗಿ ಮೆಚ್ಚುಗೆ ಪಡೆದು 'ಗಮಕ ಕಲಾನಿಧಿ' ಎಂದು ಬಿರುದು ಗಳಿಸಿದರಲ್ಲದೇ ಬಳ್ಳಾರಿ ಜಿಲ್ಲೆಯ ಜೋಳದರಾಶಿ ಗ್ರಾಮವನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸಿದ್ದಷ್ಟೇ ಅಲ್ಲದೆ ತಮ್ಮ ನಾಟಕ, ಸಾಹಿತ್ಯ, ಗಾಯನಗಳಿಂದ ಜೋಳದರಾಶಿಯ ಹೆಸರನ್ನು ಅಮರವಾಗಿಸಿದವರು.

ಇಂತಹ ಮರೆಯಬಾರದ ಮಹಾನುಭಾವರ ಹೆಸರಿನ ರಂಗಮಂದಿರವೊಂದಿದ್ದರೂ ಅವರ ಸಾಧನೆ ಇತಿಹಾಸ ತಿಳಿಸುವ ಯಾವ ಕುರುಹೂ ಅಲ್ಲಿಲ್ಲ, ಮಾತ್ರವಲ್ಲದೆ ಅವರ ಸರಿಯಾದ ಒಂದು ಭಾವಚಿತ್ರವೂ ಇಲ್ಲದಿರುವುದು ವಿಷಾದನೀಯ. ಆದ್ದರಿಂದ ಬಳ್ಳಾರಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಡಾ. ಜೋಳದರಾಶಿ ದೊಡ್ಡನಗೌಡರ ಕಂಚಿನ ಪ್ರತಿಮೆಯನ್ನು ಶೀಘ್ರವೇ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಲಾಯಿತು.

ನಿಯೋಗದಲ್ಲಿ ರಂಗತೋರಣದ ಕಾರ್ಯದರ್ಶಿ ಪ್ರಭುದೇವ ಕಪ್ಪಗಲ್ಲು, ಜೋಳದರಾಶಿ ದೊಡ್ಡನಗೌಡ ಪ್ರತಿಷ್ಠಾನದ ಗೌರವಾಧ್ಯಕ್ಷ ಬಿ.ಸಿದ್ದನಗೌಡ, ವಿವೇಕತೋರಣದ ಅಧ್ಯಕ್ಷರಾದ ಡಾ॥ ಬಿ.ಆರ್. ವಸ್ತ್ರದ, ರಂಗತೋರಣದ ಅಡವಿಸ್ವಾಮಿ, ಜೆ.ರಾಘವ, ಕೆ.ಆರ್. ಮಲ್ಲೇಶ ಕುಮಾರ್, ಪ್ರವೀಣ್ ನಾಯಕ್, ಶಿವೇಶ್ವರಗೌಡ, ಗಂಗಾಧರ ದುರ್ಗಂ ರಾಮೇಶ ಟ್ರಸ್ಟ್‌ನ ಜೋಳದರಾಶಿ ಪೊಂಪನಗೌಡ, ಮತ್ತಿತರರು ಹಾಜರಿದ್ದರು.

GADI KANNADIGA,kannada daily, printed, published , edited, & woned by murugesh b.shivapuji ,printed ,plot no:12,sy no:174/3b,press colony,kuvempu nagar, post:hindalaga-591108,Tq & Dt:belgaum, And published at plot no:12,sy no:174/3b,press colony,kuvempu nagar,post:hindalaga-591108,Tq & Dt:belgaum, karnataka, RNI NO:KAR KAN/2003/10452